## ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಭಾರತೀಯ ಹವಾಮಾನ ಇಲಾಖೆ

ಗ್ರಾಮೀಣ ಕೃಷಿ ಹವಾಮಾನ ಸೇವಾ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ನಾಗನಹಳ್ಳಿ, ಮೈಸೂರು 570 003

ದಿನಾಂಕ: 15-03-2024

### ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಕೊಡಗು ಜಿಲ್ಲೆಯ ಹವಾಮಾನ ಮತ್ತು ಕೃಷಿಕಾರ್ಯಕ್ರಮಗಳ ವರದಿ ಪತ್ರಿಕೆ

**ಹವಾಮಾನದ ಮುನ್ಸೂಚನೆ (16–03–2024 ರಿಂದ 20–03–2024)**

| Parameters | 16.03.2024 | 17.03.2024 | 18.03.2024 | 19.03.2024 | 20.03.2024 |
|---|---|---|---|---|---|
| ಮಳೆ (ಮಿ.ಮೀ) | 1 | 0 | 0 | 0 | 0 |
| ಗರಿಷ್ಠ ಉಷ್ಣಾಂಶ ($^0$ಸೆ) | 34.5 | 35.6 | 37.2 | 37.4 | 36.6 |
| ಕನಿಷ್ಠ ಉಷ್ಣಾಂಶ ($^0$ಸೆ) | 16.9 | 15.8 | 15.2 | 15.4 | 15.7 |
| ಮೋಡ (ಆಕ್ಟ್ಸ್) | 2 | 1 | 0 | 0 | 0 |
| ಗರಿಷ್ಠ ಗಾಳಿಯ ತೇವಾಂಶ (%) | 78 | 78 | 78 | 81 | 86 |
| ಕನಿಷ್ಠ ಗಾಳಿಯ ತೇವಾಂಶ (%) | 33 | 33 | 24 | 22 | 28 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 5 | 5 | 6 | 6 | 6 |
| ಗಾಳಿಯ ದಿಕ್ಕು( ಡಿಗ್ರಿ) | 248 | 158 | 195 | 158 | 112 |

**ಮುನ್ಸೂಚನೆಯ ಸಾರಾಂಶ**

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಈ ವಾರದ ಮುನ್ಸೂಚನೆ ಕೊಡಗು ಜಿಲ್ಲೆಯಲ್ಲಿ ದಿನಾಂಕ: 16–03–2024 ರಿಂದ 20–03–2024 ವರೆಗೆ ಸ್ಪಷ್ಟ ವಾತಾವರಣವಿದ್ದು, ಹಗುರ ಮಳೆ ಬರುವ ಸಂಭವವಿದೆ. ಗರಿಷ್ಠ ಉಷ್ಣಾಂಶ 34.5–37.4°C. ಮತ್ತು ಕನಿಷ್ಠ ಉಷ್ಣಾಂಶ 15.2–16.9°C ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇಕಡ 78–86% ವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇಕಡ 22–33% ವರೆಗೆ ಮತ್ತು ಗಾಳಿಯು ಗಂಟೆಗೆ 5–6 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

**ಕೃಷಿ ಚಟುವಟಿಕೆಗಳ ಬಗ್ಗೆ ಅನುಸರಿಸಬಹುದಾದ ವಿವರ:**

| ಬೆಳೆ/ ಜಾನುವಾರಗಳು | ರೋಗ ಮತ್ತು ಕೀಟ | ಹಾನಿ ಲಕ್ಷಣಗಳು | ಕೃಷಿ ಸಲಹೆಗಳು |
|---|---|---|---|

- ಬೆಳೆಗಳ ಉಳಿಕೆ ಅಥವಾ ಗೊಬ್ಬರದ ಗಿಡಗಳನ್ನು ಭೂ ಹೊದಿಕೆಯಾಗಿ ಬೆಳೆಗಳಿಕೆ ಹಾಕುವುದರಿಂದ ಮಣ್ಣಿನ ತೇವಾಂಶವನ್ನು ಕಾಪಾಡಿಕೊಳ್ಳಬಹುದು.
- ಬೆಳೆಗಳಲ್ಲಿ ಮುಖ್ಯವಾಗಿ ಬೆಳೆವಣಿಗೆ ನಿರ್ಣಾಯಕಹಂತದಲ್ಲಿ ಮಳೆ ಆಗದೇ ಇದ್ದಲ್ಲಿ ರೈತರು ಬೆಳೆಗಳಿಗೆ ರಕ್ಷಣಾತ್ಮಕ ನೀರಾವರಿಯನ್ನು ಒದಗಿಸಬೇಕು.
- ಹಿಂಗಾರು ಬೆಳೆಗಳನ್ನು ಕೊಯ್ಲು ಮಾಡಿದ ನಂತರ ಆಳವಾದ ಬೇಸಿಗೆ ಉಳುಮೆ ಮಾಡಿ ಸೂರ್ಯನ ತೀಕ್ಷ್ಣ ಕಿರಣಗಳು ಮಣ್ಣನ್ನು ಉರುಳಿಸುವುದರಿಂದ ಮೊಟ್ಟೆಗಳು, ಮರಿಹುಳುಗಳು ಮತ್ತು ಕೋಶಗಳನ್ನು ಕೊಲ್ಲುತ್ತದೆ. ಇದರಿಂದ ಮುಂದಿನ ಬೆಳೆಗಳಿಗೆ ಹರಡಬಹುದಾದ ಕೀಟಬಾದೆಯನ್ನು ತಪ್ಪಿಸಬವುದು.
- ಬೇಸಿಗೆಯ ಉಳುಮೆಯ ಮೊದಲು ಹಿಂಗಾರು ಬೆಳೆಗಳನ್ನು ಕೊಯ್ಲು ಮಾಡಿದ ನಂತರ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಕೃಷಿ ವಿಜ್ಞಾನ ಕೇಂದ್ರದಲ್ಲಿ ಮಣ್ಣಿನ ಪರೀಕ್ಷೆಯಿಂದ ಮಾಡಿಸಬೇಕು.
- ಮುಂದಿನ 4–5 ದಿನಗಳಲ್ಲಿ ಒಣಹವೆ ಮುಂದುವರಿಯುವ ಸಾಧ್ಯತೆ ಇರುವುದರಿಂದ ರೈತರು ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ

| | |
|---|---|
| | ನೀರನ್ನು ಹಾಯಿಸುವುದು ಸೂಕ್ತ. |
| ಕಾಫಿ | ಮುಂದಿನ 5 ದಿನಗಳ ಮುನ್ಸೂಚನೆಯನಂತೆ, ಒಣಹವೆಯ ಸಾಧ್ಯತೆ ಇರುವುದರಿಂದ ಕಾಫಿಯ ಕೊಯ್ಲು ಮುಂದುವರೆಸಬಹುದಾಗಿದೆ. ಕಾಫಿ ಹಣ್ಣನ್ನು ಬಿಸಿಲಿನಲ್ಲಿ ಪ್ರಮಾಣಿತ ತೇವಾಂಶಕ್ಕೆ ಸರಿಯಾಗಿ ಒಣಗಿಸಿ, ಚೆನ್ನಾಗಿ ಗಾಳಿಯಾಡುವ ತೇವಾಂಶ ರಹಿತ ಸ್ಥಳದಲ್ಲಿ ಸಂಗ್ರಹಿಸಿ, ಕಾಫಿ ಬೀಜ ಕೊರೆಯುವ ಹುಳುವಿನ ರಕ್ಷಣೆಗಾಗಿ ಕಾಫಿ ಕೊಯ್ಲು ಮುಗಿದನಂತರ ಗಿಡಗಳಲ್ಲಿ ಉಳಿದಿರುವ ಮತ್ತು ನೆಲದಲ್ಲಿ ಬಿದ್ದ ಹಣ್ಣುಗಳನ್ನು ಸಂಪೂರ್ಣವಾಗಿ ಆಯ್ದು ಶೇಖರಿಸಬೇಕು. |
| ಮೆಣಸು | ಮಣ್ಣಿನಲ್ಲಿರುವ ತೇವಾಂಶವನ್ನು ಸಂರಕ್ಷಿಸಲು ಮತ್ತು ಬಳ್ಳಿಗಳು ಹಳದಿ ಬಣ್ಣಕ್ಕೆ ತಿರುಗುವುದನ್ನು ತಡೆಯಲು ಬಳ್ಳಿಯ ಬುಡದ ಭಾಗವನ್ನು ಒಣ ತರಗೆಲೆಗಳಿಂದ ಮುಚ್ಚಬಹುದು ಮತ್ತು ಪ್ರತಿ ವಾರಕ್ಕೆ ಪ್ರತಿ ಬಳ್ಳಿಗೆ 50 ಲೀಟರ್ ನೀರನ್ನು ಒದಗಿಸಿ. ಕಾಳುಮೆಣಸಿನ ಕಟಾವು ಹಾಗು ಸಂಸ್ಕರಣೆಯನ್ನು ಮುಂದುವರೆಸಬಹುದು. ರೋಗ ಸೋಂಕಿತ ಬಳ್ಳಿಗಳನ್ನು ತೆಗೆಯುವುದು ಮತ್ತು ನಾಶಪಡಿಸುವುದು ಉತ್ತಮ. |
| ಬೇಸಿಗೆ ತಿಂಗಳಲ್ಲಿ ಪಶು ಸಂಗೋಪನಾ ಸಲಹೆಗಳು | • ಬಿಸಿಲು ಹೆಚ್ಚಾಗಿರುವುದರಿಂದ ಮಧ್ಯಾಹ್ನದಲ್ಲಿ ರಾಸುಗಳಿಗೆ ನೀರು ಹೊಡೆಯಬೇಕು ಹಾಗೂ ಕೊಟ್ಟಿಗೆಯ ನೆಲ ಮತ್ತು ಗೋಡೆಗಳಿಗೂ ಸಹ ನೀರು ಹೊಡೆಯಬೇಕು. ಇದರಿಂದ ಕೊಟ್ಟಿಗೆಯು ತಕ್ಕಮಟ್ಟಿಗೆ ತಂಪಾಗಿ ಉಳಿಯುತ್ತದೆ.<br>• ಕೊಟ್ಟಿಗೆಯಲ್ಲಿ ಗಾಳಿ ಸರಾಗವಾಗಿ ಹಾಡುವಂತೆ ವ್ಯವಸ್ಥೆ ಮಾಡಬೇಕು.<br>• ಸ್ವಚ್ಛವಾದ ನೀರನ್ನು ಕುಡಿಸಬೇಕು.<br>• ರಾಸುಗಳನ್ನು ಮಧ್ಯಾಹ್ನದ ಬಿಸಿಲಿಗೆ ಮೇಯಲು ಬಿಡಬಾರದು, ಬೆಳಿಗ್ಗೆ ಅಥವಾ ಸಂಜೆ ವೇಳೆಯಲ್ಲಿ ಮೇಯಲು ಬಿಡಬೇಕು. |

## ತಾಲ್ಲೂಕುವಾರು ಹವಾಮಾನದ ಮುನ್ಸೂಚನೆ (16–03–2024 ರಿಂದ 20–03–2024)

### ಮಡಿಕೇರಿ


| Parameter | 16.03.2024 | 17.03.2024 | 18.03.2024 | 19.03.2024 | 20.03.2024 |
|---|---|---|---|---|---|
| ಮಳೆ (ಮಿ.ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ (°ಸೆ) | 32.4 | 32.2 | 34.5 | 34.6 | 33.6 |
| ಕನಿಷ್ಠ ಉಷ್ಣಾಂಶ (°ಸೆ) | 21 | 19.8 | 19 | 19.5 | 19.8 |
| ಮೋಡ (ಆಕ್ಟ್‌ಸ್) | 3 | 1 | 1 | 1 | 1 |
| ಗರಿಷ್ಠ ಗಾಳಿಯ ತೇವಾಂಶ (%) | 85 | 80 | 83 | 87 | 95 |
| ಕನಿಷ್ಠ ಗಾಳಿಯ ತೇವಾಂಶ (%) | 31 | 33 | 23 | 21 | 27 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 4 | 4 | 3 | 3 | 4 |
| ಗಾಳಿಯ ದಿಕ್ಕು( ಡಿಗ್ರಿ) | 252 | 135 | 68 | 293 | 259 |

### ಸೋಮವಾರಪೇಟೆ


| Parameter | 16.03.2024 | 17.03.2024 | 18.03.2024 | 19.03.2024 | 20.03.2024 |
|---|---|---|---|---|---|
| ಮಳೆ (ಮಿ.ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ (°ಸೆ) | 34.5 | 30.4 | 32.1 | 31.5 | 33.9 |
| ಕನಿಷ್ಠ ಉಷ್ಣಾಂಶ (°ಸೆ) | 18.2 | 17 | 16.4 | 16.8 | 17.3 |
| ಮೋಡ (ಆಕ್ಟ್‌ಸ್) | 2 | 1 | 0 | 1 | 1 |
| ಗರಿಷ್ಠ ಗಾಳಿಯ ತೇವಾಂಶ (%) | 80 | 79 | 81 | 83 | 88 |

| | | | | | |
|---|---|---|---|---|---|
| ಕನಿಷ್ಠ ಗಾಳಿಯ ತೇವಾಂಶ (%) | 28 | 32 | 17 | 21 | 25 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 5 | 5 | 6 | 5 | 4 |
| ಗಾಳಿಯ ದಿಕ್ಕು( ಡಿಗ್ರಿ) | 285 | 113 | 101 | 68 | 252 |


| ವಿರಾಜಪೇಟೆ | | | | | |
|---|---|---|---|---|---|
| **Parameter** | **16.03.2024** | **17.03.2024** | **18.03.2024** | **19.03.2024** | **20.03.2024** |
| ಮಳೆ (ಮಿ.ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ (°ಸೆ) | 31.6 | 32 | 35.3 | 35 | 33.4 |
| ಕನಿಷ್ಠ ಉಷ್ಣಾಂಶ (°ಸೆ) | 22.3 | 21 | 20.7 | 20.8 | 21.5 |
| ಮೋಡ (ಆಕ್ಟ್ಸ್) | 2 | 1 | 0 | 1 | 1 |
| ಗರಿಷ್ಠ ಗಾಳಿಯ ತೇವಾಂಶ (%) | 83 | 86 | 79 | 84 | 91 |
| ಕನಿಷ್ಠ ಗಾಳಿಯ ತೇವಾಂಶ (%) | 35 | 34 | 20 | 19 | 27 |
| ಗಾಳಿಯ ವೇಗ (ಕಿ.ಮೀ/ ಗಂಟೆ) | 5 | 4 | 4 | 4 | 5 |
| ಗಾಳಿಯ ದಿಕ್ಕು( ಡಿಗ್ರಿ) | 75 | 225 | 60 | 158 | 248 |





**Vegetation Condition Index**



**Temperature Condition Index**




**Forecasted soil moisture**




ಹೆಚ್ಚಿನ ತಾಪಮಾನ, ಕಡಿಮೆ ಮಣ್ಣಿನ ತೇವಾಂಶ ಮತ್ತು ಕಡಿಮೆ ಸಸ್ಯವರ್ಗವನ್ನು ಎದುರಿಸುತ್ತಿರುವ ರೈತರು ಹನಿ ನೀರಾವರಿಯಂತಹ ಸಮರ್ಥ ನೀರಾವರಿ ತಂತ್ರಗಳಿಗೆ ಆದ್ಯತೆ ನೀಡಬೇಕು ಮತ್ತು ತೇವಾಂಶವನ್ನು ಸಂರಕ್ಷಿಸಲು ಮತ್ತು ಆವಿಯಾಗುವಿಕೆಯನ್ನು ತಗ್ಗಿಸಲು ಮಲ್ಚಿಂಗ್ ಅನ್ನು ಅಳವಡಿಸಬೇಕು. ಬರ-ನಿರೋಧಕ ಬೆಳೆಗಳನ್ನು ಆರಿಸಿಕೊಳ್ಳುವುದು ಮತ್ತು ಹೊದಿಕೆ ಬೆಳೆಗಳಂತಹ ಮಣ್ಣಿನ ಸಂರಕ್ಷಣಾ ವಿಧಾನಗಳನ್ನು ಬಳಸಿಕೊಳ್ಳುವುದು ಮಣ್ಣಿನ ಆರೋಗ್ಯ ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

- ರೈತರು **“ದಾಮಿನಿ”** ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮುನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ಹಾಗೆಯೇ “ಮೌಸಮ್” ಮತ್ತು“ಮೇಘದೂತ್” ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ರೈತರು ದೂರವಾಣಿ ಮೂಲಕ ಡಾ॥. ಸಿ. ರಾಮಚಂದ್ರ, ಹಿರಿಯ ಕ್ಷೇತ್ರ ಅಧೀಕ್ಷಕರು/ ಡಾ. ಸುಮಂತ್ ಕುಮಾರ್, ಜಿ. ವಿ, ಸಹ ಸಂಶೋಧಕರು, ದೂರವಾಣಿ ಸಂಖ್ಯೆ. 08212591267/ 9535345814 ರವರನ್ನು ಸಂಪರ್ಕಿಸಬಹುದು.

ಕೃಷಿ ಹವಾಮಾನ ಕ್ಷೇತ್ರ ವಿಭಾಗ,
ನಾಗನಹಳ್ಳಿ, ಮೈಸೂರು